ನೆಲವಾಗಿಲು ಗ್ರಾಮವನ್ನು ಸ್ಥಳಾಂತರಿಸುವುದು

೯೧. ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣಿಬೆನ್ನೂರು ತಾಲ್ಲೂಕು ನೆಲವಾಗಿಲು ಗ್ರಾಮವನ್ನು ಸ್ಥಳಾಂತರಿಸುವ ಕುರಿತು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೆ ?

ಆ) ಯಾವಾಗಲಿಂದ ಪ್ರಸ್ತಾವನೆ ಬಾಕಿ ಇದೆ ಮತ್ತು ಯಾವ ಕಾರಣಕ್ಕಾಗಿ ?

ಇ) ಸ್ಥಳಾಂತರಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಹೌದು.

ಆ) ಉಚ್ಚನ್ಯಾಯಾಲಯದ ತಡೆಯಾಜ್ಞೆ ಒಳಪಟ್ಟು ಸ. ನಂ. ಗಳನ್ನು ಬಿಟ್ಟರೆ ಬೇರೆ ಪ್ರಕರಣಗಳು ಬಾಕಿ ಇರುವುದಿಲ್ಲ.

ಇ) ಪ್ರಾರಂಭಿಸಲಾಗಿದೆ.

ರಾಜಗೋಪುರ ನಿರ್ಮಿಸುವುದು

೨೦೧. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಬಸವನಗುಡಿಯಲ್ಲಿರುವ ಶ್ರೀ ದೊಡ್ಡ ಬಸವಣ್ಣ ದೇವಸ್ಥಾನಕ್ಕೆ ರಾಜಗೋಪುರ ನಿರ್ಮಿಸಲು ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಅಂದಾಜು ವೆಚ್ಚ ಎಷ್ಟು ?

ಇ) ಉದ್ದೇಶಿತ ಕಾಮಗಾರಿಗೆ ೧೯೯೦–೯೧ನೇ ಸಾಲಿನಲ್ಲಿ ಮಂಜೂರಾದ ಮೊತ್ತ ಎಷ್ಟು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ರೂ. ೬.೮೦ ಲಕ್ಷಗಳು.

ಇ) ಇಲ್ಲ. ಆದರೆ ೧೯೯೧ನೇ ಸಾಲಿನಲ್ಲಿ ಈ ಕಾಮಗಾರಿಗೆ ರೂ. ೩.೪೦ ಲಕ್ಷ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಮಾರ್ಚ್ ೧೯೯೦ ರಿಂದ ಬೆಂಗಳೂರು ನಗರದ ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಾಯಿಸಿರುವ ದಸ್ತಾವೇಜುಗಳು

೨೭೮. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದ ವಿವಿಧ ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ೧೯೯೦ರ ಮಾರ್ಚ್ ೯೦ರಿಂದ ಇಲ್ಲಿಯವರೆಗೆ ನೋಂದಾಯಿಸಿರುವ ದಾಖಲೆ ಪತ್ರಗಳೆಷ್ಟು ?

ಆ) ನೋಂದಾಯಿಸುವ ವಿವಿಧ ದಾಖಲೆ ಪತ್ರಗಳಿಗೆ ಸೂರು ರೂಪಾಯಿಗಳು ಸಣ್ಣ ಉಳಿತಾಯ ಪತ್ರ ಅಥವಾ ಇಂದಿರಾ ವಿಕಾಸ ಪತ್ರವನ್ನು ಸಾರ್ವಜನಿಕರು ಕೊಂಡುಕೊಳ್ಳಬೇಕೆಂಬುದು ನಿಜವೇ ?

ಇ) ಹಾಗಾದರೆ, ಮಾರ್ಚ್ ೧೯೯೦ರಿಂದ ಈವರೆವಿಗೆ ನೋಂದಣಿಗಾಗಿ ಬರುವ ಸಾರ್ವಜನಿಕರು ವಿವಿಧ ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಒಪ್ಪಿಸಿರುವ ಸಣ್ಣ ಉಳಿತಾಯ ಪತ್ರ ಇಂದಿರಾ ವಿಕಾಸ ಪತ್ರಗಳ ಒಟ್ಟು ಮೊತ್ತವೆಷ್ಟು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಮಾರ್ಚ್ ೧೯೯೦ರಿಂದ ಇವರೆವಿಗೆ ಬೆಂಗಳೂರು ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಎಲ್ಲಾ ರೀತಿಯ ಒಟ್ಟು ೩೯,೮೪೪ ದಸ್ತಾವೇಜುಗಳು ನೋಂದಾಯಿಸಲ್ಪಟ್ಟಿರುತ್ತವೆ.

ಆ) ದಸ್ತಾವೇಜು ನೋಂದಾಯಿಸಲು ಬಂದಂತಹ ವ್ಯಕ್ತಿಗಳ ಮನ ಒಲಿಸಿ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು ಅಥವಾ ಇಂದಿರಾ ವಿಕಾಸ ಪತ್ರ ಪಡೆಯಲಾಗುತ್ತದೆ.

ಇ) ನೋಂದಣಿಗಾಗಿ ಬರುವ ಸಾರ್ವಜನಿಕರ ಮನ ಒಲಿಸಿ ರೂ. ೧೯,೯೧,೮೭೦ಗಳ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳು ಹಾಗೂ ರೂ. ೯,೫೩,೭೦೯ ಇಂದಿರಾ ವಿಕಾಸ ಪತ್ರಗಳಲ್ಲಿ ತೊಡಗಿಸಲಾಗಿದೆ.

ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವುದರ ಬಗ್ಗೆ

೪೪೬. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆಯಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಸಕ್ರಮಗೊಳಿಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯಿದೆ (ತಿದ್ದುಪಡಿ) ಮಸೂದೆ ೧೯೯೦ ಅನ್ನು ಸದನವು ಅಂಗೀಕರಿಸಿದ ನಂತರ ಅದರಂತೆ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಗಿದೆ.

II. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಆದೇ ಕಟ್ಟಡ ಸಾಮಗ್ರಿಗಳನ್ನು ಉಪಯೋಗಿಸಿ ಹೊಸ ಕಟ್ಟಡ ಕಟ್ಟುವ ಬಗ್ಗೆ ಅರ್ಜಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಗುಬ್ಬಿ ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಶಿಶುವಿಹಾರ ಮತ್ತು ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಅರ್ಜಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀ ಶಾಂತಿಸಾಗರ ವಿದ್ಯಾಪೀಠ ಇಂಗ್ಲೀಷ್ ಮಾಧ್ಯಮ ಶಾಲೆಯನ್ನು ಈಗಿರುವ ಉಗಾರ ಖೆಡ್ರ್ ಬದಲಾಗಿ ಸಂಕೇಶ್ವರ ತಾಲ್ಲೂಕಿನ ಬನಾಪೂರಕ್ಕೆ ಸ್ಥಳಾಂತರಿಸುವ ಬಗ್ಗೆ ಹಾಗೂ

ಆ) ಸಂಕೇಶ್ವರದಲ್ಲಿ ಸಾರ್ವಜನಿಕರ ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ಮಂದಿರವನ್ನು ಕಟ್ಟಿಸುವ ಬಗ್ಗೆ ಅರ್ಜಿಗಳನ್ನೂ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಯಿತು.

III. ವರದಿಗಳನ್ನೊಪ್ಪಿಸುವುದು

ಅ) ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ ಪರಿಶಿಷ್ಟ ಜಾತಿ ವಂಶ್ರ ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯು ೯ನೇ ವಿಧಾನ ಸಭೆಯ ಮೊದಲನೆಯ ವರದಿಯನ್ನೂ ಸಭೆಗೆ ಒಪ್ಪಿಸುತ್ತೇನೆ.